**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ; ಸಿ3(4)ಪ್ರಾಶಿ ಉ.ವ್ಯಾ.ಅನು(ಭಾಗ-1) 2010-11 ದಿನಾಂಕ: 01-03-2011

## ಸುತ್ತೋಲೆ

ವಿಷಯ:- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಿಎ. ಬಿಎಸ್ಸಿ, ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರದ ಸಂಖ್ಯೆ 135 ಯೋಯೋಕ 2010 ದಿನಾಂಕ 2.7.2010 (ಇಡಿ 79 ಸ್ಟೀಮರ್ (ಯುನಿಕ್) 2010 ದಿನಾಂಕ 2.7.2010.

2)ಈ ಕಛೇರಿ ಸಮ ಪತ್ರ ಸಂಖ್ಯೆ ದಿನಾಂಕ 16.8.2010 ಮತ್ತು 28.10.2010.

******

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ, ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಬಿಎ ಬಿಎಸ್ಸಿ ವ್ಯಾಸಂಗಕ್ಕೆ ವೇತನಸಹಿತವಾಗಿ ನಿಯೋಜಿಸುವ ಬಗ್ಗೆ ಉಲ್ಲೇಖ 1ರ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿದೆ. ಈ ಬಗ್ಗೆ ರಾಜ್ಯದ ಎಲ್ಲಾ ಉಪನಿರ್ದೇಶಕರಿಂದ ಮಾಹಿತಿ ಕೇಳಲಾಗಿತ್ತು. ಆದರೆ ಸಕಾಲದಲ್ಲಿ ಮಾಹಿತಿ ಬಾರದ ಕಾರಣ 2010-11ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಿಎ ಬಿ.ಎಸ್ಸಿ ವ್ಯಾಸಂಗಕ್ಕೆ ನಿಯೋಜಿಸಲಾಗಿಲ್ಲ.

ಈ ಕಾರ್ಯಾಲಯದ ದಿನಾಂಕ 16.8.2010ರ ಪತ್ರದಲ್ಲಿ ನೀಡಿದ ಸೂಚನೆಯಲ್ಲಿ ಬಹುತೇಕ ಉಪನಿರ್ದೇಶಕರಿಂದ ಆಸಕ್ತ ಶಿಕ್ಷಕರ ಸಂಖ್ಯೆಯ ಮಾಹಿತಿಯನ್ನು ನೀಡಿರುವುದಿಲ್ಲ. ಕೆಲವು ಉಪನಿರ್ದೇಶಕರು ಶೂನ್ಯ ವರದಿ ಕಳುಹಿಸಿರುವುದು ವಿಷಾದನೀಯ. ಈ ಬಗ್ಗೆ ಶಿಕ್ಷಕರಿಗೆ ಸರಿಯಾದ ಮಾಹಿತಿ ತಲುಪದಿರುವುದರಿಂದ ಉನ್ನತ ವ್ಯಾಸಂಗ ಮುಂದುವರೆಸಲು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಮನವಿ ಸಲ್ಲಿಸಿರುವುದಿಲ್ಲ.

ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಬಿಎ ಬಿಎಸ್ಸಿ ವ್ಯಾಸಂಗಕ್ಕೆ ನಿಯೋಜಿಸಲು ಈ ಕೆಳಕಾಣಿಸಿದ ಮಾರ್ಗಸೂಚಿ ಹೊರಡಿಸಲಾಗಿದೆ.

1. ಶಿಕ್ಷಕರು ಖಾಯಂ ಪೂರ್ವ ಸೇವಾ ಅವಧಿ ಮುಗಿಸಿರಬೇಕು. ಸೇವೆಗೆ ಸೇರಿದ ದಿನದಿಂದ ಕನಿಷ್ಟ 5 ವರ್ಷ ಸೇವೆ ಸಲ್ಲಿಸಿರಬೇಕು. 45 ವರ್ಷಗಳ ವಯೋಮಿತಿ ಮೀರರಬಾರದು.
2. ಆಂಗ್ಲ ವಿಷಯಗಳನ್ನು ಒಳಗೊಂಡ ಬಿಎ ಪದವಿಗಾಗಿ ಪಿಯುಸಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು ಅಥವಾ ಪ್ರಥಮ ಭಾಷೆ ಆಂಗ್ಲ ಭಾಷೆಯಾಗಿರಬೇಕು ಅಥವಾ ದ್ವಿತೀಯ ಭಾಷೆಯಲ್ಲಿ ಶೇಕಡ 60 ಅಂಕ ಗಳಿಸಿರಬೇಕು.
3. ಕರ್ನಾಟಕ ನಾಗರೀಕ ಸೇವಾ ಪರಿಶಿಷ್ಟ- iiಎ ನಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳನ್ನು ಉನ್ನತ ವ್ಯಾಸಂಗ ಮುಂದುವರೆಸಲು ಇಚ್ಚಿಸುವ ಶಿಕ್ಷಕರು ಪೂರೈಸಿರಬೇಕು.
4. ಪ್ರತಿ ತಾಲ್ಲೂಕಿನಿಂದ ಕನಿಷ್ಟ 15 ಶಿಕ್ಷಕರ ಜೇಷ್ಠತಾ ಪಟ್ಟಿ ಇರಲೇಬೇಕು.
5. ಹಾಲಿ ಕೆಲಸ ನಿರ್ವಹಿಸುತ್ತಿರುವ ಜಿಲ್ಲೆಯೊಳಗಿನ ಯಾವುದಾದರೂ 5 ಕಾಲೇಜುಗಳಲ್ಲಿ ವ್ಯಾಸಂಗ ಮುಂದುವರಿಸುವ ಇಚ್ಛೆಯನ್ನು ಆದ್ಯತೆ ಅನುಸಾರ ಅರ್ಜಿಯಲ್ಲಿ ನಮೂದಿಸುವುದು.
6. 2001ನೇ ಸಾಲಿಗಿಂತ ಮೊದಲು ನೇಮಕವಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಪಿಯುಸಿಯಲ್ಲಿ ಪಿಸಿಎಂಬಿ ವ್ಯಾಸಂಗ ಮಾಡಿದ್ದರೆ ಅಂತಹವರನ್ನು ಸಹ ಬಿ.ಎಸ್ಸಿ ವ್ಯಾಸಂಗಕ್ಕೆ ಸಿದ್ದಪಡಿಸುವ ಜೇಷ್ಟತೆಗೆ ಪರಿಗಣಿಸುವುದು.
7. ಶಿಕ್ಷಕರು ಪದವಿ ಪೂರೈಸಿದ ನಂತರ ಕನಿಷ್ಟ 10 ವರ್ಷ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದಾಗಿ ರೂ 10 ಮೌಲ್ಯದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.
8. ನಿಯೋಜನೆಯು ಒಟ್ಟು ಸೇವಾವಧಿಯಲ್ಲಿ ಒಂದು ಸಾರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.

9. ನಿಯೋಜಿತ ಅಭ್ಯರ್ಥಿಯು ವ್ಯಾಸಂಗವನ್ನು ಸಕಾಲದಲ್ಲಿ ಪೂರೈಸದಿದ್ದಲ್ಲಿ ವ್ಯಾಸಂಗದ ಅವಧಿಯ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ವಸೂಲು ಮಾಡುವ ಬಗ್ಗೆ ಫಾರಂ ಸಂಖ್ಯೆ –19 ರಲ್ಲಿ ಕರಾರು ಪತ್ರ ಸಲ್ಲಿಸುವುದು.
10. ನಿಯೋಜನೆಯು ವೃಂದಬಲದ ಶೇ 5 ರಷ್ಟನ್ನು ಮೀರಬಾರದು.
11. ತರಬೇತಿಯ ಅವಧಿಯಲ್ಲಿ ಆಕಸ್ಮಿಕ ರಜೆ ಮತ್ತು ಬೇಸಿಗೆ ರಜೆ ಹೊರತುಪಡಿಸಿ ಯಾವುದೇ ತೆರನಾದ ರಜೆಗೆ ಅವಕಾಶವಿರುವುದಿಲ್ಲ.
12. ವ್ಯಾಸಂಗಕ್ಕಾಗಿ ತಗಲುವ ನೈಜ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುವುದು.

ಆಸಕ್ತ ಹಾಗೂ ಅರ್ಹ ಶಿಕ್ಷಕರಿಂದ ನಿಗಧಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸ್ವೀಕರಿಸಲು ವ್ಯಾಪಕ ಪ್ರಚಾರ ನೀಡಿ ಶಿಕ್ಷಕರಿಂದ ಸ್ವೀಕರಿಸಿದ ಅರ್ಜಿ ಮಾಹಿತಿಯನ್ನು ಗಣಕೀಕರಿಸಿ ಕ್ರೂಢೀಕರಿಸಿದ ನಂತರ ಮುಂಬಡ್ತಿ ನೀಡುವಾಗ ಅನುಸರಿಸುವ ನಿಯಮಗಳನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ದಿನಾಂಕ 1.1.2011ರಲ್ಲಿದಂತೆ ತಾಲ್ಲೂಕುವಾರು ತಾತ್ಕಾಲಿಕ ಜೇಷ್ಠತಾಪಟ್ಟಿ ಸಿದ್ದಪಡಿಸಿ, ಸೂಚನಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು 5 ದಿನಗಳ ಕಾಲಾವಕಾಶ ನೀಡುವುದು. ಶಿಕ್ಷಕರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಅಗತ್ಯ ದಾಖಲೆಗಳೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯ ಆಧಾರ ಹಾಗೂ ಶಿಕ್ಷಕರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಜಿಲ್ಲಾ ಹಂತದಲ್ಲಿ ಜೇಷ್ಠತಾ ಪಟ್ಟಿಯನ್ನು ಉಪನಿರ್ದೇಶಕರು ಮುಂಬಡ್ತಿ ನೀಡುವಾಗ ಅನುಸರಿಸುವ ನಿಯಮಗಳನ್ವಯ ಸಿದ್ದಪಡಿಸುವುದು. ಪ್ರತಿ ವರ್ಷ ಜನವರಿ ಒಂದನೇ ತಾರೀಖಿನಲ್ಲಿದ್ದಂತೆ ಜೇಷ್ಠತಾಪಟ್ಟಿ ಪರಿಷ್ಕರಿಸುವುದು.

ಜಿಲ್ಲಾ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆಯನ್ವಯ, ಪ್ರತಿ ತಾಲ್ಲೂಕಿಗೆ ಮೂರು ವಿಜ್ಞಾನ, ಇಬ್ಬರು ಆಂಗ್ಲ ಭಾಷಾ ಶಿಕ್ಷಕರ ಪ್ರಸ್ತಾವನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ರಾಜ್ಯದ ಎಲ್ಲಾ ಉಪನಿರ್ದೇಶಕರು ಸ್ವೀಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಕ್ರೂಢೀಕರಣಕ್ಕಾಗಿ ನಿಗಧಿಪಡಿಸಿದ ನಮೂನೆಯಲ್ಲಿ ಎಲ್ಲಾ ಮಾಹಿತಿಯನ್ನು ಶಿಕ್ಷಕರವಾರು ಭರ್ತಿ ಮಾಡಿ ಸಲ್ಲಿಸುವುದು. ಆಂಗ್ಲ ಭಾಷಾ ವ್ಯಾಸಂಗಕ್ಕೆ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ತಾಲ್ಲೂಕಿನಿಂದ ಇಬ್ಬರು ಕಲಾ ಶಿಕ್ಷಕರನ್ನು ಆಯ್ಕೆ ಮಾಡುವುದು. ಜೇಷ್ಠತಾಪಟ್ಟಿ ಸಿದ್ದಪಡಿಸುವಾಗ ಕಲಾ ಮತ್ತು ಆಂಗ್ಲ ಶಿಕ್ಷಕರ ಮನವಿಗಳನ್ನು ಪರಿಗಣಿಸುವುದು.

ಅರ್ಜಿ ಭರ್ತಿ ಮಾಡುವಾಗ ಶಿಕ್ಷಕರು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯೊಳಗೆ ಅವರು ವ್ಯಾಸಂಗ ಮುಂದುವರೆಸಲು ಇಚ್ಛಿಸುವ 5 ಸರ್ಕಾರಿ/ ಅನುದಾನಿತ/ಅನುದಾನ ರಹಿತ ಕಾಲೇಜುಗಳ ಪೂರ್ಣ ಹೆಸರು ಹಾಗೂ ವಿಳಾಸವನ್ನು ಆದ್ಯತೆಯನ್ವಯ ನಮೂದಿಸುವುದು. ಅರ್ಜಿದಾರರು ನಮೂದಿಸಿದ ಕಾಲೇಜುಗಳಲ್ಲಿ ಜೇಷ್ಠತೆ ಆಧಾರ ಸೀಟುಗಳ ಹಂಚಿಕೆ ಆಗದಿದ್ದಲ್ಲಿ ಇಲಾಖೆ ಹಂಚಿಕೆ ಮಾಡಿದ ಕಾಲೇಜಿನಲ್ಲಿ ವ್ಯಾಸಂಗ ಮುಂದುವರೆಸಬೇಕಾಗುತ್ತದೆ. ಅಥವಾ ಅರ್ಜಿದಾರರು ಅವರು ಇಚ್ಛೆಪಟ್ಟ ಕಾಲೇಜಿನಲ್ಲಿ ಅವರು ವೈಯುಕ್ತಿಕವಾಗಿ ಪ್ರವೇಶ ಪಡೆದು ವ್ಯಾಸಂಗ ಮುಂದುವರೆಸಲು ಅವಕಾಶ ಮಾಡಿಕೊಡಲಾಗುವುದು.

2011–12ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಾರಂಭವಾಗುವ ಮೊದಲು ಬಿಎ ಬಿಎಸ್ಸಿ ವ್ಯಾಸಂಗ ಮುಂದುವರೆಸುವ ಶಿಕ್ಷಕರ ಪ್ರಸ್ತಾವನೆಯನ್ನು ಶಾಲಾ ಕಾರ್ಯಕ್ಕೆ ಅಡಚಣೆ ಆಗದಂತೆ ಬದಲಿ ಶಿಕ್ಷಕರನ್ನು ನಿಯೋಜಿಸುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಚೆಕ್‌ಲಿಸ್ಟನಲ್ಲಿ ಸ್ಪಷ್ಟ ಅಭಿಪ್ರಾಯದ ಶಿಫಾರಸ್ಸು ಮಾಡತಕ್ಕದ್ದು.

ಇದು ಕಾಲಮಿತಿ ಪ್ರಕರಣವಾಗಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ದಿ) ಹಾಗು ಎಲ್ಲಾ ಕ್ಷೇತ್ರ ಸಿಬ್ಬಂದಿ ವೈಯುಕ್ತಿಕ ಗಮನಹರಿಸಿ ಸ್ಥಳೀಯ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಸೂಚನಾ ಫಲಕಗಳಲ್ಲಿ ಪ್ರಕಟಿಸಿ, ಸಭೆಗಳಲ್ಲಿ ಕಡ್ಡಾಯವಾಗಿ ವಿಷಯ ತಿಳಿಸಿ ಹೆಚ್ಚು ಸಂಖ್ಯೆಯ ಶಿಕ್ಷಕರನ್ನೊಳಗೊಂಡ ಜೇಷ್ಠತಾ ಪಟ್ಟಿಯನ್ನು ತುರ್ತಾಗಿ ಸಿದ್ದಪಡಿಸಲು ತಿಳಿಸಿದೆ. ಉಪನಿರ್ದೇಶಕರು (ಆಡಳಿತ) ಇವರು ಅಂತಿಮ ಜೇಷ್ಠತಾ ಪಟ್ಟಿಯ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಕಳುಹಿಸಿಕೊಡಲು ತಿಳಿಸಿದೆ.

ಜೇಷ್ಟತಾ ಪಟ್ಟಿ ಸ್ವೀಕರಿಸಿದ ನಂತರ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿತ ಶಿಕ್ಷಕರ ಜಾಗಕ್ಕೆ ಅನಿವಾರ್ಯ ಸಂದರ್ಭಗಳಲ್ಲಿ ಬೇರೆ ಶಿಕ್ಷಕರನ್ನು ಆಯ್ಕೆ ಮಾಡುವ ಬಗ್ಗೆ ಮುಂದುವರೆದ ಮಾರ್ಗಸೂಚಿ ಹೊರಡಿಸಲಾಗುವುದು.

ಸಂಬಂಧಿಸಿದ ಉಪನಿರ್ದೇಶಕರು ಬಿಎ ಅಥವಾ ಬಿಎಸ್ಸಿ ವ್ಯಾಸಂಗದ ಪ್ರಸ್ತಾವನೆಗಳನ್ನು **ದಿ 31-03-2011** ರ ಒಳಗೆ ಜೇಷ್ಠತಾ ಪಟ್ಟಿ ಸಹಿತ ಈ ಕಛೇರಿಗೆ ಸಲ್ಲಿಸುವುದು. ಅರ್ಜಿನಮೂನೆ, ಚೆಕ್‌ಲಿಸ್ಟ್, ಜೇಷ್ಠತಾಪಟ್ಟಿ ನಮೂನೆ, ಕ್ರೋಡೀಕರಣಕ್ಕಾಗಿ ಸಿದ್ದಪಡಿಸಿರುವ ನಮೂನೆ ಹಾಗೂ ಫಾರಂ ನಂ-19 ರ ಪ್ರತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ಅದರಂತೆ ಪ್ರತಿ ಶಿಕ್ಷಕರ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸಲು ತಿಳಿಸಿದೆ.

(ಎ.ದೇವಪ್ರಕಾಶ್)
ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಗೆ,
ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ) ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ
ಪ್ರತಿಯನ್ನು

1. ಅಪರ ಅಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ ಇವರಿಗೆ ಮಾಹಿತಿಗಾಗಿ

\\Typing2\D\EST3\latha\BABSC